# ಕೆನರಾ ವೆಲ್‌ಫೇರ್ ಟ್ರಸ್ಟ್, ಅಂಕೋಲಾ

ಮತ್ತು

# ಜನತಾ ವಿದ್ಯಾಲಯ, ಕಡತೋಕಾ

ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ



## ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ
## 3ನೇ ಸಂಸ್ಕೃತ ಸೌರಭ ಕಾರ್ಯಕ್ರಮ

ದಿನಾಂಕ: **05ನೇ ಡಿಸೆಂಬರ್ 2015** ಸಮಯ: **11.00 ರಿಂದ 2.00**

**ಸ್ಥಳ: ಶಾಸ್ತ್ರೀ ಸಭಾಭವನ ಜನತಾ ವಿದ್ಯಾಲಯ ಕಡತೋಕಾ ಕೆನಡಿ ಸಭಾಭವನ**

## ಒಂದು ವರದಿ

# ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ ಸಂಸ್ಕೃತ ಸೌರಭ ಕಾರ್ಯಕ್ರಮ

ಕೆನರಾ ವೆಲ್‌ಫೆರ್ ಟ್ರಸ್ಟ್ ಮತ್ತು ಜನತಾ ವಿದ್ಯಾಲಯ ಕಡತೋಕಾ ಸಂಯುಕ್ತ ಆಶ್ರಯದಲ್ಲಿ ದಿ. 05–12–2015 ರಂದು ಪಂಚೀಭೂತರಾದ ಗಣಪತಿ ಅಣ್ಣಪ್ಪಯ್ಯ ಪೈ ಅವರ ಸಂಸ್ಮರಣಾರ್ಥ 3ನೇ ವರ್ಷದ 'ಸಂಸ್ಕೃತ ಕಾರ್ಯಕ್ರಮ ನಡೆಯಿತು. ಕೆಕ್ಕಾರಿನ ಶ್ರೀವಿದ್ಯಾರಣ್ಯ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳ ಸ್ವರನಿಬದ್ಧ ವೇದಘೋಷದೊಂದಿಗೆ ಕಾರ್ಯಕ್ರಮ ಸಂಪ್ರದಾಯ ಬದ್ಧವಾಗಿ ಪ್ರಾರಂಭಗೊಂಡಿತು ನಂತರ ವಿದ್ಯಾಲಯದ ವಿದ್ಯಾರ್ಥಿನಿಯರು ಕಾರ್ಯಕ್ರಮದ ನಿರ್ವಿಘ್ನ ಪರಿಸಮಾಪ್ತಿಗಾಗಿ ಸರ್ವಾಂತರ್ಯ ಚೈತನ್ಯ ಸ್ವರೂಪಿಯಾದ ನಿತ್ಯ ಶುದ್ಧ ಬಂಧ್ಧನಾದ ಭಗವಂತನನ್ನು ಸುಶ್ರಾವ್ಯವಾಗಿ ಪ್ರಾರ್ಥಿಸಿದರು. ಸಮಾಗಮಿಸಿರುವ ಸಮಸ್ತ ಗಣ್ಯರನ್ನು ಸಭಾಸದರನ್ನು ಸರ್ವರನ್ನು ಪ್ರಭಾರೆ ಪ್ರಾಚಾರ್ಯರಾದ ಶ್ರೀ ಪ್ರಕಾಶ ಸಿ.ಎಸ್. ಅವರು ಸ್ವಾಗತಿಸಿದರು. ಕಾರ್ಯಕ್ರಮದ ಹಿನ್ನೆಲೆ, ಉದ್ದೇಶ ಮತ್ತು ಗಣಪತಿ ಪೈ ಅವರ ವ್ಯಕ್ತಿತ್ವವನ್ನು ವಿವರಿಸುತ್ತಾ ಪ್ರಾಸ್ತಾವಿಕ ನುಡಿಗಳೊಂದಿಗೆ ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳನ್ನು ಉಪನ್ಯಾಸಕರಾದ ಶ್ರೀ ವಿ.ಆರ್.ಭಟ್ಟ ಅವರು ಪರಿಚಯಿಸಿದರು.





ಕೆನರಾ ವೆಲ್‌ಫೆರ್ ಟ್ರಸ್ಟ್‌ನ ಟ್ರಸ್ಟಿಗಳಾದ ಸದಾ ಕ್ರಿಯಾಶೀಲರೂ ಸಂಸ್ಥೆಯ ಸದಾ ಹಿತೈಷಿಗಳೂ ಆದ ಪ್ರೊ. ಜಿ.ವಿ.ಭಟ್ಟ ಕೊಂಕೇರಿಯವರು ಉದ್ಘಾಟಕರಾಗಿ ಆಗಮಿಸಿ ದೀಪವನ್ನು ಬೆಳಗಿಸುವುದರ ಮೂಲಕ ವಿದ್ಯುಕ್ತವಾಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ತಮ್ಮ ಉದ್ಘಾಟನಾ ಭಾಷಣದಲ್ಲಿ ಗಣಪತಿ ಪೈ ಅವರು ವೃತ್ತಿಯಲ್ಲಿ ಏರಿದ ಎತ್ತರವನ್ನು ವಿಸ್ತರಿಸುತ್ತಾ ಅವರ ತ್ಯಾಗಗುಣವನ್ನು ಪ್ರಶಂಸಿದರು. ಸಂಸ್ಕೃತ ಭಾಷೆ ಆದಿಭಾಷೆ, ಎಲ್ಲ ಭಾಷೆಗಳಿಗೆ ಜನನಿ, ಅಪಾರವಾದ ಜ್ಞಾನ ನಿಧಿ, ಈ ಭಾಷೆಯಲ್ಲಿರುವ ಜ್ಞಾನವು ಸಾರ್ವಕಾಲಿಕವಾದುದು, ಎಂದು ಅಭಿಪ್ರಾಯಪಟ್ಟರು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ವಿದ್ವಾನ್ ಸದಾಶಿವ ಶಾಸ್ತ್ರೀ ಹೊಸಳ್ಳಿ ಇವರು ಭೋಜ ಕವಿಯ ಚಂಪೂರಾಮಾಯಣವನ್ನು ಕುರಿತು ಬಹಳ ಅರ್ಥಪೂರ್ಣವಾಗಿ, ವಿದ್ವತ್ಪೂರ್ಣವಾಗಿ, ಮಾತನಾಡಿದರು. ಹಲವಾರು ಕಾವ್ಯಸೌಂದರ್ಯಯುಕ್ತವಾದ ದೃಷ್ಟಾಂತಗಳನ್ನು ಉದಾಹರಿಸುತ್ತಾ ಕಾವ್ಯದ ಶ್ರೇಷ್ಠತೆಯನ್ನು ಅಭಿವ್ಯಕ್ತಿಸಿದರು.








ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ ನವದೆಹಲಿ ಇದರ ಸೆನೆಟ್ ಸದಸ್ಯರಾದ ವಿದ್ವಾನ್ ಗಜಾನನ ಭಟ್ಟ ಉಮ್ಮಚಗಿ ಅವರು ಮಾತನಾಡುತ್ತಾ ಸಂಸ್ಕೃತ ಭಾಷೆಯಿಲ್ಲದೇ ಸಂಸ್ಕೃತಿನಿರೂಪಣೆ ಅಸಾಧ್ಯ. ಸಂಸ್ಕೃತಿಯ ರಕ್ಷಣೆಯಲ್ಲಿ ತನ್ಮೂಲಕ ಸಾಧ್ಯವಾಗುವ ನವನಾಗರೀಕರ ಮಾನವೀಯ ವರ್ತನೆಗಳಲ್ಲಿ ಸಂಸ್ಕೃತ ಅನಿವಾರ್ಯ. ಪ್ರಾಚೀನ ಗುರುಕುಲ ಪದ್ಧತಿಯು ಮನುಷ್ಯನ ಐಹಿಕ ಆಮುಷ್ಮಿಕ ಸಾಧನೆಗೆ ಹೇತುವಾಗಿತ್ತು. ಸಂಸ್ಕಾರಗಳನ್ನು ಬಿತ್ತುವ ಅರ್ಥೈಸಿಕೊಳ್ಳುವ, ಅನುಸಂಧಾನಿಸಿಕೊಳ್ಳುವ ಗೃಹವಾಗಿತ್ತು. ಆದರೆ ಆಧುನಿಕ ಶಿಕ್ಷಣ ಪದ್ಧತಿಯು ಪ್ರತಿಸಂಸ್ಕೃತಿಯ ನಿರ್ಮಾಣದ ಹೆಸರಿನಲ್ಲಿ ಸಂಸ್ಕೃತಿಯನ್ನು ತಿರುಚುವ ವ್ಯವಸ್ಥೆಯಾಗಿದೆ. ಹಾಗಾಗಿ ಸಾಮಾಜಿಕ ವ್ಯವಸ್ಥೆಯು ಸ್ವಾರ್ಥ, ಮತ್ಸರ, ದ್ವೇಷ, ಕಾಪಟ್ಯಾದಿಗುಣಾಧಿಕ್ಯಯುಕ್ತವಾಗಿದೆ. ಹಾಗಾಗಿ ಸಂಸ್ಕೃತಿ ನಿರ್ಮಾಣದಲ್ಲಿ ಸಂಸ್ಕೃತ ಭಾಷಾಧ್ಯಯನ ಅಗತ್ಯ ಎಂದು ಪ್ರತಿಪಾದಿಸಿದರು. ಕೆ.ವೆ.ಟ್ರಸ್ಟಿನ ವಿಶೇಷ ಸಂಯೋಜಕರಾದ ಶ್ರೀ ಪ್ರಶಾಂತ ರಾವ್, ಶ್ರೀ ರಾಜು ನಾಯ್ಕ ಮತ್ತು ಶ್ರೀಮತಿ ಮೀನಾಕ್ಷಿ ನಾಯ್ಕ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದ ಅಂಗವಾಗಿ ದಿನಾಂಕ 02–12–2015 ರಂದು ಪ್ರಾಥಮಿಕ ಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ ಭಗವದ್ಗೀತಾ ಕಂಠಪಾಠ ಸ್ಪರ್ಧೆ, ಪ್ರೌಢ ಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ, ಪದವಿ ಪೂರ್ವ ಕಾಲೇಜು ವಿಭಾಗದ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ಸಂಸ್ಕೃತ ಪಾಠಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

| | | |
|---|---|---|
| | ಭಗವದ್ಗೀತಾ ಕಂಠಪಾಠ (ಪ್ರಾಥಮಿಕ ವಿಭಾಗ) | |
| ಕುಮಾರ ಅಜಯ ವೆಂಕಟರಮಣ ಭಟ್ಟ | ಎಸ್.ಕೆ.ಪಿ. ಪ್ರಾಥಮಿಕ ಶಾಲೆ, ಅರೇಅಂಗಡಿ | ಪ್ರಥಮ ಸ್ಥಾನ |
| ಕುಮಾರಿ ವೈಷ್ಣವಿ ಪ್ರಭಾಕರ ಭಟ್ಟ | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜಡ್ಡಿಗದ್ದೆ | ದ್ವಿತೀಯ ಸ್ಥಾನ |
| ಕುಮಾರಿ ಅಂಕಿತಾ ಶಂಕರ ಬಟ್ಟ | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನವಿಲಗೋಣ ನಂ–2 | ತೃತೀಯ ಸ್ಥಾನ |
| | ಭಾಷಣ (ಪ್ರೌಢಶಾಲಾ ವಿಭಾಗ) | |
| ಕುಮಾರಿ ರಮ್ಯಾ ರಮೇಶ ಭಂಡಾರಿ | ಜನತಾ ವಿದ್ಯಾಲಯ, ಕಡತೋಕಾ | ಪ್ರಥಮ ಸ್ಥಾನ |
| ಕುಮಾರಿ ಗಂಗಾ ಸತ್ಯನಾರಾಯಣ ಹೆಗಡೆ | ಜನತಾ ವಿದ್ಯಾಲಯ, ಕಡತೋಕಾ | ದ್ವಿತೀಯ ಸ್ಥಾನ |
| ಕುಮಾರಿ ಶ್ರೇಯಾ ಭಟ್ಟ | ಎಸ್.ಕೆ.ಪಿ. ಪ್ರೌಢಶಾಲೆ, ಅರೇಅಂಗಡಿ | ತೃತೀಯ ಸ್ಥಾನ |
| | ಪ್ರಬಂಧ (ಪದವಿ ಪೂರ್ವ ಕಾಲೇಜು ವಿಭಾಗ) | |
| ಕುಮಾರಿ ಮಂಜುಶ್ರೀ ಎಂ. ಹೆಗಡೆ | ಎಸ್.ಡಿ.ಎಮ್. ಕಾಲೇಜು, ಹೊನ್ನಾವರ | ಪ್ರಥಮ ಸ್ಥಾನ |
| ಕುಮಾರಿ ಶಾಂಭವಿ ಜಿ. ಭಟ್ಟ | ಎಸ್.ಡಿ.ಎಮ್. ಕಾಲೇಜು, ಹೊನ್ನಾವರ | ದ್ವಿತೀಯ ಸ್ಥಾನ |
| ಕುಮಾರಿ ಮಲ್ಲಿಕಾ ವಾಸು ಗೌಡ | ಜನತಾ ವಿದ್ಯಾಲಯ ಪ.ಪೂ. ಕಾಲೇಜು, ಕಡತೋಕಾ | ತೃತೀಯ ಸ್ಥಾನ |
| | ಭಾಷಣ (ಸಂಸ್ಕೃತ ಪಾಠಶಾಲಾ ವಿಭಾಗ) | |
| ಕುಮಾರ ಕೃಷ್ಣ ಸುಬ್ರಹ್ಮಣ್ಯ ಜೋಶಿ | ಶ್ರೀ ರಾಘವೇಂದ್ರ ಭಾರತಿ ಸವೇದ ಸಂಸ್ಕೃತ ಪಾಠಶಾಲಾ, ಸುಬ್ರಹ್ಮಣ್ಯ, ಮುಗ್ವಾ | ಪ್ರಥಮ ಸ್ಥಾನ |
| ಕುಮಾರ ರತ್ನಮೌಳಿ ಈಶ್ವರ ಭಟ್ಟ | ಶ್ರೀ ವಿದ್ಯಾರಣ್ಯ ಸಂಸ್ಕೃತ ಪಾಠಶಾಲಾ, ಕೆಕ್ಕಾರ | ದ್ವಿತೀಯ ಸ್ಥಾನ |











ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಗಣ್ಯರು ವಿತರಿಸಿದರು ಮುಖ್ಯಶಿಕ್ಷಕಿಯವರಾದ ಶ್ರೀಮತಿ ಉಷಾ ಜಿ. ಭಟ್ಟ ಅವರು ವಂದಿಸಿದರು. ಶಿಕ್ಷಕರಾದ ಶ್ರೀ ಪ್ರದೀಪ ಖರ್ವಾ ನಿರ್ವಹಿಸಿದರು. ಎಲ್ಲ ಸಿಬ್ಬಂದಿವರ್ಗದವರು ಸಹಕರಿಸಿದರು. ಕಾರ್ಯಕ್ರಮದ ನಂತರ ಸರ್ವರಿಗೂ ಕೂಡಾ ಭೋಜನದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.